1. ಮೌಲ್ಯಮಾಪನದ ಯಾವ ಘಟಕವನ್ನು ‘ ಕಾಗದ ಚಿನ್ನ ’ ವೆಂದು ಕರೆಯಲಾಗುತ್ತದೆ ?

(1) ಯೂರೋಡಾಲರ್
(2) ಪೆಟ್ರೋಡಾಲರ್
(3) ಎಸ್‌ಡಿಆರ್
(4) ಜಿಡಿಆರ್

2. ಸಾಮಾಜಿಕ ಭದ್ರತಾ ಜಾಲದಲ್ಲಿ ಸೇರಿಕೆಯಲ್ಲಿಲ್ಲದ ಅಸಂಘಟಿತ ವಲಯದ ಕೆಲಸಗಾರರ ಪಿಂಚಣಿ ಯೋಜನೆಯು ಈ ಕೆಳಗಿನವುಗಳಲ್ಲಿ ಯಾವುದು ?

(1) ಸ್ವಾಭಿಮಾನ್
(2) ಸ್ವಶಕ್ತಿ
(3) ಸ್ವಾವಲಂಬನ
(4) ಸ್ವಯಂಸಿದ್ಧ

3. ಈ ಕೆಳಗೆ ಸೂಚಿಸಿದ ಪಲ್ಲವ ದೊರೆಗಳಲ್ಲೊಬ್ಬನು ಮಕ್ತ ವಿಲಾಸಪ್ರಹಸನ ಎಂಬ ಹಾಸ್ಯ ಕೃತಿಯನ್ನು ರಚಿಸಿದನು. ಅವನನ್ನು ಗುರುತಿಸಿ.

(1) ಮೊದಲನೆಯ ಮಹೇಂದ್ರವರ್ಮನ್
(2) ಪರಮೇಶ್ವರವರ್ಮನ್
(3) ಮೊದಲನೆಯ ನರಸಿಂಹವರ್ಮನ್’
(4) ಎರಡನೆಯ ಮಹೇಂದ್ರವರ್ಮನ್

4. ಈ ಕೆಳಗಿನ ಪಟ್ಟಿಯಲ್ಲಿ ಹತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕನೋಜವನ್ನು ಭೇಟಿಮಾಡಿದ ಅರಬ್ ಪ್ರವಾಸಿಗನನ್ನು ಹೆಸರಿಸಿ.

(1) ಅಲ್ ಬೆರೂನಿ
(2) ಮಸೂದಿ
(3) ಅಲ್ ಬಹಾದುರಿ
(4) ಅಲ್ ಮದೈನಿ

www.kpscvaani.com

5. ಈ ಕೆಳಗಿನ ಪಟ್ಟಿಯಲ್ಲಿ ನಾಗರ ದೇವಾಲಯವನ್ನು ದ್ರಾವಿಡ ದೇವಾಲಯಗಳಿಂದ ಬೇರ್ಪಡಿಸುವ ಲಕ್ಷಣಗಳನ್ನು ಗುರುತಿಸಿ:

(a) ತಳನಕ್ಷೆಯಲ್ಲಿನ ಭದ್ರ ಮತ್ತು ಕರ್ಣಗಳ ಉಬ್ಬುಗಳು
(b) ಕಪೋತ ವಿನ್ಯಾಸಗಳು
(c) ವಕ್ರರೇಖೀಯ ಶಿಖರ
(d) ಭೂಮಿ, ಆಮ್ಲಗಳ ಜೋಡಣೆ

ಸೂಚಿಸಿದ ಸಂಕೇತಗಳನ್ನು ಬಳಸಿಕೊಂಡು ಈ ಕೆಳಗಿನ ಸರಿಯಾದ ಹೇಳಿಕೆಯನ್ನು / ಹೇಳಿಕೆಗಳನ್ನು ಆಯ್ಕೆಮಾಡಿ.

(1) (a), (c) ಮತ್ತು (d)
(2) (a), (b) ಮತ್ತು (c)
(3) (b), (c) ಮತ್ತು (d)
(4) ಮೇಲಿನ ಎಲ್ಲವೂ

6. ಅಲ್ಲಾವುದ್ದೀನ್ ಖಿಲ್ಜಿ ಪರಿಚಯಿಸಿದ ಮಾರುಕಟ್ಟೆ ನಿಯಂತ್ರಣ ಪದ್ಧತಿಯು __________ ವ್ಯಾಪ್ತಿಗೆ ಸೇರಿತ್ತು:

(1) ದಿವಾನ್ ï ಇ ï ರಿಯಾಸತ್
(2) ದಿವಾನ್ ï ಇ ï ರಿಸಾಲತ್
(3) ದಿವಾನ್ ï ಇ ï ಇನ್‌ಷಾ
(4) ದಿವಾನ್ ï ಇ ï ಅರ್ಝ್

7. 19ನೇ ಶತಮಾನದವರೆಗೆ ಭಾರತದಲ್ಲಿ ಪರಿಚಿತವಾಗಿದ್ದ ಅತಿ ದೊಡ್ಡ ಕಾಲುವೆಗಳ ಸಂಪರ್ಕಜಾಲವನ್ನು ನಿರ್ಮಿಸಿದ ಸುಲ್ತಾನ:

(1) ಘಿಯಾಸುದ್ದೀನ್ ತುಘಲಕ್
(2) ಫಿರೋಜ್ ಷಾ ತುಘಲಕ್
(3) ಮಹಮದ್ ಬಿನ್ ತುಘಲಕ್
(4) ಅಲ್ಲಾವುದ್ದೀನ್ ಖಿಲ್ಜಿ

8. ಅಮೀರ್ ಖುಸ್ರು ದೆಹಲಿ ಸುಲ್ತಾನರ ಕಾಲದ ಶ್ರೇಷ್ಠ ಪರ್ಷಿಯನ್ ಕವಿಯೆಂದು ಗೌರವಿಸಲ್ಪಟ್ಟಿದ್ದಾನೆ.
ಈ ಕೆಳಗಿನ ಯಾವ ಕೃತಿಯನ್ನು ಅವನು ಬರೆದಿಲ್ಲ ?

(1) ತಾರೀಕ್ ï ಇ – ಫಿರೋಜ್ ಷಾಹಿ
(2) ಆಶಿಖಾ
(3) ಖಿರಾನ್ ï ಉಸ್ – ಸದೇನ್
(4) ಮಿಫ್ತಾ ï ಉಲ್ – ಫುತುಹ್

www.kpscvaani.com

9. ದ್ಯುತಿವಿದ್ಯುದೀಯ ಪರಿಣಾಮ ಎಂದರೆ :

(1) ಸೂರ್ಯನ ಬೆಳಕಿಗೆ ಒಡ್ಡಿದಾಗ ಸಿಲಿಕಾನ್ ಸೌರಕೋಶಗಳಿಂದ ವಿದ್ಯುತ್ ಪ್ರವಾಹ ಉತ್ಪತ್ತಿಯಾಗುವುದು.
(2) ಲೋಹಗಳಿಂದ, ಬೆಳಕಿನ ಸಂಪೂರ್ಣ ಪ್ರತಿಫಲನ. ಇದು ಲೋಹಗಳಿಗೆ ವಿಶಿಷ್ಟವಾದ ಹೊಳಪು ನೀಡುತ್ತದೆ.
(3) ಒಂದು ಸಾಪೇಕ್ಷತಾ ಪರಿಣಾಮ
(4) ಸಾಕಷ್ಟು ಶಕ್ತಿಯಿಂದ ತಾಡಿಸಿದಾಗ, ಲೋಹದಿಂದ ಎಲೆಕ್ಟ್ರಾನುಗಳು ಹೊರಹೊಮ್ಮುವುದು.

10. ಹಣ್ಣುಗಳನ್ನು ಪರಿಪಕ್ವಗೊಳಿಸಲು ಬಳಸಲಾಗುವ ಅನಿಲ ಎಂದರೆ:

(1) ಮೀಥೇನ್
(2) ಈಥೇನ್
(3) ಎಥಿಲೀನ್
(4) ಇಂಗಾಲದ ಡೈಆಕ್ಸೈಡ್

11. " ಪ್ರಭುಲಿಂಗಲೀಲೆ " ಕೃತಿಯನ್ನು ಬರೆದವರು ಯಾರು ?

(1) ವಿದ್ಯಾರಣ್ಯ
(2) ನರಹರಿ
(3) ಚಾಮರಸ
(4) ಲಕ್ಕಣ್ಣ ದಂಡೇಶ

12. " ಪೂರ್ವ ಪಶ್ಚಿಮ ಸಮುದ್ರಾಧೀಶ್ವರ " ಎಂಬ ಬಿರುದನ್ನು ಗಳಿಸಿದ್ದ ವಿಜಯನಗರದ ದೊರೆ ಯಾರು ?

(1) ಒಂದನೇ ದೇವರಾಯ
(2) ಒಂದನೇ ಹರಿಹರ
(3) ಸಂಗಮ
(4) ಕೃಷ್ಣದೇವರಾಯ

13. ವಿಜಯನಗರ ಕಾಲದ ಅತ್ಯಂತ ಜನಪ್ರಿಯವಾದ ಕ್ರೀಡೆ ಯಾವುದು ?

(1) ಬೇಟೆ
(2) ರಥ ಓಟ ಪಂದ್ಯ
(3) ಅಶ್ವ ಓಟ ಪಂದ್ಯ
(4) ಮಲ್ಲಯುದ್ಧ (ಕುಸ್ತಿ)

www.kpscvaani.com

14. " ಜಗದ್ಗುರು " ಎಂದು ಕರೆಸಿಕೊಂಡ ಬಹುಮನಿ ಸುಲ್ತಾನ ಯಾರು ?

(1) ಮೊಹಮ್ಮದ್ ಗವಾನ್
(2) ಮೊಹಮ್ಮದ್ ಆದಿಲ್ ಷಾ
(3) ಎರಡನೆಯ ಇಬ್ರಾಹಿಂ ಆದಿಲ್ ಷಾ
(4) ಆಲಿ ಆದಿಲ್ ಷಾ

15. ಜಿ.ಎನ್.ಪಿ. ಯು ಜಿ.ಡಿ.ಪಿ. ಗಿಂತ ಭಿನ್ನವಾಗಿದ್ದು, ಮೊದಲನೆಯದು ಒಳಗೊಳ್ಳುವುದು:

(1) ರಫ್ತು ಆದಾಯ
(2) ಅಪ್ರತ್ಯಕ್ಷ ತೆರಿಗೆಗಳು
(3) ಸವಕಳಿ
(4) ವಿದೇಶದಿಂದ ಬರುವ ನಿವ್ವಳ ಆದಾಯ

16. ಪ್ರಸಿದ್ಧ (INA) ' ಭಾರತೀಯ ರಾಷ್ಟ್ರೀಯ ಸೈನ್ಯ ' ಜಾಡಿನ ಪ್ರತಿಪಾದಕರು ಯಾರು ?

(1) ಭೂಲಾಭಾಯಿ ದೇಸಾಯಿ
(2) ಅಸಫ್ ಅಲಿ
(3) ಸುಭಾಷ್ ಚಂದ್ರ ಬೋಸ್
(4) ಸಿ. ರಾಜಗೋಪಾಲಾಚಾರಿ

17. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದವರು ಯಾರು ?

(1) ಜೆ.ಬಿ. ಕ್ರಿಪಲಾನಿ
(2) ಡಾ. ರಾಜೇಂದ್ರ ಪ್ರಸಾದ್
(3) ಜವಾಹರಲಾಲ್ ನೆಹರೂ
(4) ಡಾ. ಬಿ.ಆರ್. ಅಂಬೇಡ್ಕರ್

18. ' ಅಂಧೇರ್ ನಗರಿ ಚೌಪಟ್ ರಾಜ ' ಎಂಬ ನಾಟಕವನ್ನು ರಚಿಸಿದವರು ಯಾರು ?

(1) ಗೋವರ್ಧನರಾಂ ಎಂ. ತ್ರಿಪಾಠಿ
(2) ಮುನ್ಷಿ ಪ್ರೇಂಚಂದ್
(3) ಫಕೀರ್ ಮೋಹನ್ ಸೇನಾಪತಿ
(4) ಭರತೇಂದು ಹರಿಶ್ಚಂದ್ರ

www.kpscvaani.com

19. ಈ ಕೆಳಗಿನವುಗಳಲ್ಲಿ ಯಾವುದರ ತನಿಖೆಗಾಗಿ, ಬ್ರಿಟಿಷ್‌ರಿಂದ ಹಂಟರ್ ಆಯೋಗವು ನೇಮಕವಾಯಿತು ?

(1) ಬಾರ್ಡೋಲಿ ಸತ್ಯಾಗ್ರಹ
(2) ಖಿಲಾಫತ್ ಚಳುವಳಿ
(3) ಜಲಿಯನ್ ವಾಲಾಬಾಗ್ ದುರಂತ
(4) ಚೌರಿಚೌರಾ ಘಟನೆ

20. ಗಾಂಧೀಜಿಯವರಿಂದ ಮೊದಲ ಸತ್ಯಾಗ್ರಹ ಚಳುವಳಿಯು ಇಲ್ಲಿ ಪ್ರಾರಂಭವಾಯಿತು ?

(1) ಚಂಪಾರಣ್ಯ
(2) ಬಾರ್ಡೋಲಿ
(3) ದಂಡಿ
(4) ಬರೋಡ

21. ಇತ್ತೀಚೆಗೆ ಭಾರತದಲ್ಲಿ ಲಿಂಗ ಸಮಾನತೆ ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ವಿಶ್ವಸಂಸ್ಥೆಯ ಮಹಿಳಾ ವಕೀಲೆಯಾಗಿ ಯಾರು ನೇಮಕಾತಿಯಾದರು ?

(1) ದೀಪಿಕಾ ಪಡುಕೋಣೆ
(2) ಐಶ್ವರ್ಯಾ ರಜನೀಕಾಂತ್
(3) ಐಶ್ವರ್ಯಾ ರೈ
(4) ಮಾಧುರಿ ದೀಕ್ಷಿತ್

22. ಸೈಮನ್ ಆಯೋಗದ ವಿರುದ್ಧದ ಪ್ರದರ್ಶನದಲ್ಲಿ, ಲಾಲ್ ಲಜಪತ್ ರಾಯ್‌ರವರು ಮಾರಣಾಂತಿಕ ಗಾಯಗಳಿಗೆ ತುತ್ತಾದರು. ಈ ಘಟನೆ ನಡೆದುದು ಎಲ್ಲಿ ?

(1) ಅಮೃತ್‌ಸರ
(2) ದೆಹಲಿ
(3) ಲಾಹೋರ್
(4) ಜಾಲಂಧರ್

www.kpscvaani.com

23. ಭಾರತೀಯರ ಪ್ರಾತಿನಿಧ್ಯದ ಕುರಿತಾದ ವಿಂಗಡಣೆಯ ಬಗ್ಗೆ ಕೈಗೊಳ್ಳಲಾದ ಕೆಳಗಿನ ಪ್ರಯತ್ನಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿ.

(a) ನೆಹರೂ ವರದಿ

(b) ಎರಡನೇ ದುಂಡು ಮೇಜಿನ ಪರಿಷತ್ತು

(c) ಸೈಮನ್ ಆಯೋಗ

(d) ಪೂನಾ ಒಪ್ಪಂದ

ಕೆಳಗಿನ ಸಂಕೇತಗಳ ಸಹಾಯದಿಂದ ಆರಿಸಿ.

(1) (b), (a), (c), (d)
(2) (d), (c), (b), (a)
(3) (c), (a), (b), (d)
(4) (d), (a), (b), (c)

24. ನಾಗರಿಕ ಉಲ್ಲಂಘನಾ ಚಳುವಳಿಯು ಅನುಸರಿಸಿದ್ದು :

(1) ಆನಿ ಬೆಸೆಂಟ್‌ರಿಂದಾದ ಹೋಂ ರೂಲ್‌ನ ಘೋಷಣೆ
(2) ಬಂಗಾಳದ ವಿಭಜನೆ
(3) ದಂಡಿ ಯಾತ್ರೆ
(4) ಕಾಂಗ್ರೆಸ್‌ನಿಂದ ಪೂರ್ಣ ಸ್ವರಾಜ್ಯದ ಘೋಷಣೆ

25. 1932ರ ಸೆಪ್ಟೆಂಬರ್ 20 ರಂದು, ಯರವಾಡಾದ ಕಾರಾಗೃಹದಲ್ಲಿ ಗಾಂಧೀಜಿಯವರು ಆಮರಣಾಂಕ ಉಪವಾಸವನ್ನಾರಂಭಿಸಿದುದು ಇದರ ವಿರುದ್ಧವಾಗಿ :

(1) ಬ್ರಿಟಿಷ್‌ರಿಂದ ಸತ್ಯಾಗ್ರಹಿಗಳ ದಮನ
(2) ಗಾಂಧಿ ï ಇರ್ವಿನ್ ಒಪ್ಪಂದದ ಉಲ್ಲಂಘನೆ
(3) ರ್‍ಯಾಂಸೇ ಮ್ಯಾಕ್‌ಡೋನಾಲ್ಡ್‌ನ ಕೋಮುವಾರು ನಿರ್ಣಯ (ಅವಾರ್ಡ್)
(4) ಕಲ್ಕತ್ತಾದಲ್ಲಿನ ಕೋಮುವಾರು ರೈತರು

26. 1940ರಲ್ಲಿ ವೈಯಕ್ತಿಕವಾಗಿ ವಿನೋಬಾ ಭಾವೆಯವರು ಸತ್ಯಾಗ್ರಹವನ್ನು ಇಲ್ಲಿಂದ ಪ್ರಾರಂಭಿಸಿದರು:

(1) ಖೇರಾ ಜಿಲ್ಲೆಯ ನಾದಿಯದ್, ಗುಜರಾತ್
(2) ಪವನಾರ್, ಮಹಾರಾಷ್ಟ್ರ
(3) ಪುನ್ನಪ್ರ ï ವಾಯಲೋರ್, ಕೇರಳ
(4) ಗುಂಟೂರ್, ಆಂಧ್ರಪ್ರದೇಶ

www.kpscvaani.com

27. ಇತ್ತೀಚೆಗೆ ಹೊನೊಲುಲು ಜಾಗತಿಕ ಸಮ್ಮೇಳನದಲ್ಲಿ ನಿಸರ್ಗ ಕೆಂಪು ಪಟ್ಟಿಯ ಅಂತರಾಷ್ಟ್ರೀಯ ಸಂರಕ್ಷಣಾ ಒಕ್ಕೂಟದಲ್ಲಿ ಯಾವ ಪ್ರಾಣಿ ಪ್ರಭೇದಗಳನ್ನು ಸೇರಿಸಲಾಯಿತು ?

(1) ಚಿಂಪಾಂಜಿ
(2) ಗೊರಿಲ್ಲಾ
(3) ರೈನೋಸ್
(4) ಕೋಬ್ರಾ

28. ರಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತರಾದ ಸಾಕ್ಷಿ ಮಲಿಕ್‌ರನ್ನು ಕುಸ್ತಿ ಕ್ರೀಡೆಯ ನಿರ್ದೇಶಕರನ್ನಾಗಿ ಯಾವ ವಿಶ್ವವಿದ್ಯಾಲಯವು ನೇಮಕ ಮಾಡಿತು:

(1) ಬನಾರಸ್ ಹಿಂದೂ ವಿಶ್ವವಿದ್ಯಾಲಯ
(2) ಪಾಂಡಿಚೆರಿ ವಿಶ್ವವಿದ್ಯಾಲಯ
(3) ರೋಟಕ್ ವಿಶ್ವವಿದ್ಯಾಲಯ
(4) ಮೇಲಿನ ಯಾವುದೂ ಅಲ್ಲ

29. ಇತ್ತೀಚೆಗೆ ಸಂಶೋಧಿಲ್ಪಟ್ಟ ಮರೂನ್ ಮತ್ತು ಚಿನ್ನದ ಬಣ್ಣದ ಲಕ್ಷಣಗಳನ್ನು ದೊಡ್ಡ ಮೀನಿನ ಪ್ರಭೇದಗಳನ್ನು ಯಾವ ವ್ಯಕ್ತಿಯ ಹೆಸರಿನಿಂದ ಹೆಸರಿಸಲಾಯಿತು ?

(1) ಒಬಾಮಾ
(2) ದಲೈಲಾಮಾ
(3) ಮದರ್ ತೆರೇಸಾ
(4) ಪೋಪ್ ಜಾನ್

30. ಯಾವ ಆತಿಥೇಯ ರಾಜ್ಯವು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರೇಕ್ಷಕರನ್ನು ಆಕರ್ಷಿಸಲು 2016, ನವೆಂಬರ್ 11 ರಿಂದ 13 ರವರೆಗೆ ಮೂರು ದಿನಗಳ ಪಕ್ಷಿ ಉತ್ಸವವನ್ನು ನಡೆಸಲಿದೆ ?

(1) ಉತ್ತರ ಪ್ರದೇಶ
(2) ಗೋವಾ
(3) ಆಂಧ್ರ ಪ್ರದೇಶ
(4) ಮಹಾರಾಷ್ಟ್ರ

31. 2016ನೇ ಸಾಲಿನ ಜೀವಮಾನ ಸಾಧನೆಯ ಆಸ್ಕರ್ ಪ್ರಶಸ್ತಿಯನ್ನು ಪಡೆದ ಹಾಲಿವುಡ್ ನಟರು ಯಾರು ?

(1) ಜೆಟ್ ಲೀ
(2) ಜಾಕಿ ಚಾನ್
(3) ಬ್ರಾಡ್ ಪಿಟ್
(4) ವಿಲ್ ಸ್ಮಿತ್

www.kpscvaani.com

32. ಮಹಾಜನಪದರು ಮತ್ತು ಅವರ ರಾಜಧಾನಿಗಳನ್ನು ಕೆಳಗೆ ಕೊಡಲಾಗಿದೆ.

(a) ಕಾಶಿ – ವಾರಣಾಸಿ
(b) ಅಂಗ – ಚಂಪಾ
(c) ವಜ್ಜಿ ï ವೈಶಾಲಿ
(d) ವತ್ಸ ï ಕೌಶಾಂಬಿ

ಸರಿಯಾದ ಜೋಡಿಗಳನ್ನು ಸಂಕೇತಗಳ ಸಹಾಯದಿಂದ ಆರಿಸಿ:

(1) (a) ಮಾತ್ರ
(2) (b) ಮತ್ತು (c)
(3) (a) ಮತ್ತು (d)
(4) (a), (b), (c) ಮತ್ತು (d)

33. ಬುದ್ಧರ ಸಾಹಿತ್ಯವು ಈ ಭಾಷೆಯಲ್ಲಿ ಬರೆಯಲ್ಪಟ್ಟಿದೆ :

(1) ಪ್ರಾಕೃತ
(2) ಪಾಳಿ
(3) ಸಂಸ್ಕೃತ
(4) ತಮಿಳು

34. 12ನೇ ಮೇ 2016 ರಿಂದಲೂ ನಟಿಸುವ ಸಾಮರ್ಥ್ಯ ಹೊಂದಿದ್ದು, ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು ಬ್ರೆಜಿಲ್‌ನ ನೂತನ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದವರು ಯಾರು ?

(1) ಮೈಖೆಲ್ ಟೆಮೊರ್
(2) ಡಿಲ್ಮಾ ರೌಸೆಫ್
(3) ಪೀಟರ್ ಲವಿನಾ
(4) ಚಾರ್ಲ್ಸ್ ಮರಿನ್

35. ಇತ್ತೀಚೆಗೆ ಭಾರತದ ಚುನಾವಣಾ ಆಯೋಗದಿಂದ ಯಾವ ಪಕ್ಷವು ರಾಷ್ಟ್ರೀಯ ಪಕ್ಷದ ಸ್ಥಾನಮಾನವನ್ನು ಪಡೆಯಿತು ?

(1) ತೃಣಮೂಲ ಕಾಂಗ್ರೆಸ್
(2) ಡಿ.ಎಂ.ಡಿ.ಕೆ
(3) ಪಿ.ಎಂ.ಕೆ
(4) ಎ ಐ ಎಸ್ ಆರ್ ಸಿ

www.kpscvaani.com

36. "ಸಿಕ್ಸ್ ಮೆಷಿನ್ ' ಎಂಬ ಹೆಸರಿನಿಂದ ಕರೆಯಲ್ಪಟ್ಟ, ತಮ್ಮ ಆತ್ಮ ಕಥೆಯಲ್ಲಿ ತಮ್ಮ ಜೀವನ ಕಥೆಯನ್ನು ಬರೆದ ಪ್ರಸಿದ್ಧ ಕ್ರಿಕೆಟ್ ಚೇತನವನ್ನು ಹೆಸರಿಸಿ.

(1) ವೀರೇಂದ್ರ ಸೆಹ್ವಾಗ್
(2) ಎ.ಬಿ. ಡೆ ವಿಲಿಯರ್ಸ್
(3) ಕ್ರಿಸ್ ಗೇಲ್
(4) ರಿಕಿ ಪೊಂಟಿಂಗ್

37. 2016 ರ ಬೇಸಿಗೆಯ ಪಂದ್ಯಗಳ ನಂತರ ಯಾವ ಭಾರತೀಯ ಬಂದೂಕುಗಾರ (ಶೂಟರ್) ಅಧಿಕೃತವಾಗಿ ತಮ್ಮ ನಿವೃತ್ತಿಯನ್ನು ಪ್ರಕಟಿಸಿದರು?

(1) ಗಗನ್ ನಾರಂಗ್
(2) ಜಿತು ರಾಯ್
(3) ಅಭಿನವ್ ಬಿಂದ್ರಾ
(4) ವಿಜಯ ಕುಮಾರ್

38. ವಿಶ್ವದಾದ್ಯಂತ ಬಡತನವನ್ನು ಉಪಶಮನಗೊಳಿಸುವ ಧರ್ಮಾರ್ಥ ಪ್ರಯತ್ನಗಳನ್ನು ಹೆಚ್ಚಿಸಲು ವಾರ್ಷಿಕವಾಗಿ ಯಾವ ದಿನದಂದು ಅಂತರ ರಾಷ್ಟ್ರೀಯ ಧರ್ಮದರ್ಶಿ ದಿನವನ್ನಾಗಿ ಆಚರಿಸಲಾಗುತ್ತಿದೆ ?

(1) 4ನೇ ಸೆಪ್ಟೆಂಬರ್
(2) 5ನೇ ಸೆಪ್ಟೆಂಬರ್
(3) 6ನೇ ಸೆಪ್ಟೆಂಬರ್
(4) 7ನೇ ಸೆಪ್ಟೆಂಬರ್

39. ಈ ದಿನದಂದು ಭೂಮಿಯು ಸೂರ್ಯನಿಂದ ಗರಿಷ್ಠ ದೂರದಲ್ಲಿರುತ್ತದೆ :

(1) ಜುಲೈ 4
(2) ಜನವರಿ 30
(3) ಸೆಪ್ಟೆಂಬರ್ 22
(4) ಡಿಸೆಂಬರ್ 22

www.kpscvaani.com

40. ________ ನಿಂದ ________ ಕಡೆಗೆ ಚಲಿಸಿದಂತೆಲ್ಲಾ ಹಗಲು ಮತ್ತು ರಾತ್ರಿಗಳ ವ್ಯತ್ಯಾಸವು ಹೆಚ್ಚಾಗುತ್ತಾ ಹೋಗುತ್ತದೆ.

(1) ಸಮಭಾಜಕ ವೃತ್ತ, ಧ್ರುವಗಳು
(2) ಧ್ರುವಗಳು, ಸಮಭಾಜಕ ವೃತ್ತ
(3) ಕರ್ಕಾಟಕ ಸಂಕ್ರಾತಿ ವೃತ್ತ, ಸಮಭಾಜಕ ವೃತ್ತ
(4) ಕರ್ಕಾಟಕ ಸಂಕ್ರಾತಿ ವೃತ್ತ, ಮಕರ ಸಂಕ್ರಾತಿ ವೃತ್ತ

41. ಯಾವ ರಾಜ್ಯದ ಶೇಕಡಾ 90 ರಷ್ಟು ಪ್ರದೇಶವು ಅರಣ್ಯಗಳಲ್ಲಿದೆ ?

(1) ಪಶ್ಚಿಮ ಬಂಗಾಳ
(2) ಅರುಣಾಚಲ ಪ್ರದೇಶ
(3) ಮಧ್ಯ ಪ್ರದೇಶ
(4) ಕೇರಳ

42. ಭಾರತದ " ಸಕ್ಕರೆಯ ಕೊಳಗ " ವೆಂದು ಯಾವ ರಾಜ್ಯವು ಕರೆಯಲ್ಪಟ್ಟಿದೆ ?

(1) ಉತ್ತರ ಪ್ರದೇಶ
(2) ಪಂಜಾಬ್
(3) ಆಂಧ್ರ ಪ್ರದೇಶ
(4) ಬಿಹಾರ್

43. ಯಾವ ರಾಜ್ಯದಲ್ಲಿ ನೈವೇಲಿ ಥರ್ಮಲ್ ವಿದ್ಯುತ್ ಕೇಂದ್ರವು ಸ್ಥಾಪಿತವಾಗಿದೆ ?

(1) ಉತ್ತರ ಪ್ರದೇಶ
(2) ಮಧ್ಯ ಪ್ರದೇಶ
(3) ತಮಿಳುನಾಡು
(4) ಕರ್ನಾಟಕ

44. ರಾಚನಿಕ ನಿರುದ್ಯೋಗವು ಉಂಟಾಗುವುದು ಇದರಿಂದ :

(1) ಹಣದುಬ್ಬರ ಪರಿಸ್ಥಿತಿಗಳು
(2) ತೂಕ ಉದ್ಯೋಗದ ಪಕ್ಷಪಾತ
(3) ಕಚ್ಚಾ ವಸ್ತುಗಳ ಕೊರತೆ
(4) ಉತ್ಪಾದನಾ ಸಾಮರ್ಥ್ಯದ ಅಭಾವ

www.kpscvaani.com

45. ಭಾರತದಲ್ಲಿ ರಾಷ್ಟ್ರೀಯ ಆದಾಯವು ಇದರಿಂದ ಗಣನೆಯಾಗುವುದು:

(1) ಹಣಕಾಸಿನ ಮಂತ್ರಿಮಂಡಲ
(2) ಕೇಂದ್ರೀಯ ಸಂಖ್ಯಾಶಾಸ್ತ್ರೀಯ ಸಂಘಟನೆ
(3) ಯೋಜನಾ ಆಯೋಗ
(4) ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆ

46. ಜಿ.ಎನ್.ಪಿ. ಮತ್ತು ಎನ್. ಎನ್ .ಪಿ ಗಳ ನಡುವಣ ವ್ಯತ್ಯಾಸವು ಇದಕ್ಕೆ ಸಮ:

(1) ಬಾಳಿಕೆ ಬರುವ ಸರಕುಗಳ ಮೇಲೆ ಗ್ರಾಹಕ ವೆಚ್ಚ
(2) ಪ್ರತ್ಯಕ್ಷ ತೆರಿಗೆ ಆದಾಯ
(3) ಅಪ್ರತ್ಯಕ್ಷ ತೆರಿಗೆ ಆದಾಯ
(4) ಬಂಡವಾಳ ಸವಕಳಿ

47. ಭಾರತದಲ್ಲಿ ಹಣಕಾಸಿನ ಮಸೂದೆಯು ಇವರಿಂದ ದೃಢೀಕರಿಸಲ್ಪಡುತ್ತದೆ :

(1) ಪ್ರಧಾನ ಮಂತ್ರಿಗಳು
(2) ಹಣಕಾಸಿನ ಮಂತ್ರಿಗಳು
(3) ಸಭಾಪತಿ
(4) ಮೇಲ್ಮನೆಯ ಅಧ್ಯಕ್ಷರು

48. ಮೊದಲ ಬಾರಿಗೆ ಸಂವಿಧಾನದ ಪ್ರಸ್ತಾವನೆಯು ಇದರಿಂದ ತಿದ್ದುಪಡಿಯಾಯಿತು :

(1) 24ನೇ ತಿದ್ದುಪಡಿ
(2) 42ನೇ ತಿದ್ದುಪಡಿ
(3) 44ನೇ ತಿದ್ದುಪಡಿ
(4) ಮೇಲಿನ ಯಾವುದೂ ಅಲ್ಲ

49. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಾವ ಪ್ರಕರಣದಲ್ಲಿ, ಪ್ರಸ್ತಾವನೆಯು ಸಂವಿಧಾನದ ಭಾಗವೆಂದು ಅಧಿಕೃತಗೊಳಿಸಿದೆ ?

(1) ಗೋಲಕ್‌ನಾಥ್ ಪ್ರಕರಣ
(2) ಬೆರುಬರಿ ಪ್ರಕರಣ
(3) ಕೇಶವಾನಂದ ಭಾರತಿ ಪ್ರಕರಣ
(4) ಮೇಲಿನ ಎಲ್ಲಾ ಪ್ರಕರಣಗಳು

www.kpscvaani.com

50. ಈ ಕೆಳಗಿನವುಗಳಲ್ಲಿ ಯಾವುದು ಮೂಲಭೂತ ಹಕ್ಕು ಅಲ್ಲ ?

(1) ಆಸ್ತಿಯ ಹಕ್ಕು
(2) ಶೋಷಣೆಯ ವಿರುದ್ಧ ಹಕ್ಕು
(3) ಸಮಾನತೆಯ ಹಕ್ಕು
(4) ಧಾರ್ಮಿಕ ಸ್ವಾತ್ರಂತ್ರ್ಯದ ಹಕ್ಕು

51. ಭಾರತದ ರಾಷ್ಟ್ರಾಧ್ಯಕ್ಷರ ವಿರುದ್ಧ ದೋಷಾರೋಪಣೆಯ ನಡೆವಳಿಗಳನ್ನು ಇವರು ಉಪಕ್ರಮಿಸಬಹುದು (ಆರಂಭಿಸಬಹುದು) ?

(1) ಸರ್ವೋಚ್ಚ ನ್ಯಾಯಾಲಯದಿಂದ
(2) ಲೋಕ ಸಭೆಯಲ್ಲಿ ಮಾತ್ರ
(3) ಪಾರ್ಲಿಮೆಂಟ್‌ನ  ಉಭಯಸದನಗಳಲ್ಲಿ ಒಂದು
(4) ಪಾರ್ಲಿಮೆಂಟ್‌ನ ಎರಡೂ ಸದನಗಳು ಜಂಟಿಯಾಗಿ ಸೇರಿದ್ದಾಗ ಮಾತ್ರ

52. ರಾಷ್ಟ್ರಾಧ್ಯಕ್ಷರು ಮಾಡುವ ತುರ್ತು ಪರಿಸ್ಥಿತಿಯ 3 ವಿಧಗಳ ಘೋಷಣೆಯನ್ನು ಸಂಸತ್ತಿನ ಒಂದೊಂದು ಸದನದ ಮುಂದೆಯೂ ಅನುಮೋದನೆಗಾಗಿ ಇಡತಕ್ಕದ್ದು ?

(1) ಒಂದು ತಿಂಗಳ ಒಳಗಾಗಿ
(2) ಎರಡು ತಿಂಗಳುಗಳ ಒಳಗಾಗಿ
(3) ಆರು ತಿಂಗಳುಗಳ ಒಳಗಾಗಿ
(4) ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಪ್ರಕರಣದಲ್ಲಿ ಒಂದು ತಿಂಗಳೊಳಗಾಗಿ ಮತ್ತು ಸಂವಿಧಾನಾತ್ಮಕ ಯಂತ್ರದ ವಿಫಲತೆ ಮತ್ತು ಹಣಕಾಸಿನ ತುರ್ತು ಪರಿಸ್ಥಿತಿಗಳ ಸಂದರ್ಭಗಳಲ್ಲಿ ಎರಡು ತಿಂಗಳುಗಳ ಒಳಗಾಗಿ

53. ಉಪಾಧ್ಯಕ್ಷರ ಅಧಿಕಾರಾವಧಿಯು :

(1) ಅಧ್ಯಕ್ಷರು ಹೊಂದಿರುವ ಅವಧಿಯಷ್ಟನ್ನೇ ಹೊಂದಿಕೊಂಡಿದೆ.
(2) 5 ವರ್ಷಗಳು
(3) ಅಧ್ಯಕ್ಷರ ಇಚ್ಛೆಯ ಮೇಲೆ ಅವಲಂಬಿತವಾಗಿದೆ.
(4) 6 ವರ್ಷಗಳು

www.kpscvaani.com

54. ಪ್ರಧಾನಮಂತ್ರಿಯವರ ರಾಜೀನಾಮೆ ಅಥವಾ ಮರಣವು ಘಟಿಸಿದಾಗ :

(1) ಮಂತ್ರಿಮಂಡಲವು ಸ್ವಯಂಚಾಲಿತವಾಗಿ ಕೊನೆಗೊಳ್ಳುವುದು.
(2) ಮಂತ್ರಿಮಂಡಲದ ಅತ್ಯಂತ ಹಿರಿಯ ಸದಸ್ಯರು ಸ್ವಯಂಚಾಲಿತವಾಗಿ ಪ್ರಧಾನಮಂತ್ರಿಯಾಗುತ್ತಾರೆ.
(3) ಲೋಕಸಭೆಯು ತನ್ನಂತಾನೇ ಕೊನೆಗೊಳ್ಳುವುದು ಮತ್ತು 6 ತಿಂಗಳುಗಳ ಒಳಗಾಗಿ ಹೊಸದಾಗಿ ಚುನಾವಣೆಗಳನ್ನು ನಡೆಸಬೇಕಾಗುವುದು.
(4) ಅಧ್ಯಕ್ಷರು ಮೇಲಿನ ಯಾವ ಕ್ರಮಗಳನ್ನಾದರೂ ಕೈಗೊಳ್ಳಬಹುದು.

55. ಭಾರತದ ಸಂಸತ್ತು ಇವುಗಳನ್ನೊಳಗೊಂಡಿದೆ :

(1) ಅಧ್ಯಕ್ಷರು, ಲೋಕ ಸಭೆ ಮತ್ತು ರಾಜ್ಯ ಸಭೆ
(2) ಲೋಕ ಸಭೆ ಮತ್ತು ರಾಜ್ಯ ಸಭೆ
(3) ಲೋಕ ಸಭೆ, ಪ್ರಧಾನ ಮಂತ್ರಿಗಳು ಮತ್ತು ಸಭಾಪತಿಗಳು
(4) ಮೇಲಿನ ಯಾವುದೂ ಅಲ್ಲ

56. ಹಣಕಾಸಿನ ಮಸೂದೆಯು ಉದ್ಭವವಾಗುವುದು :

(1) ಸಂಸತ್ತಿನ ಉಭಯಸದನಗಳಲ್ಲೊಂದರಲ್ಲಿ
(2) ಲೋಕ ಸಭೆಯಲ್ಲಿ ಮಾತ್ರ
(3) ರಾಜ್ಯ ಸಭೆಯಲ್ಲಿ ಮಾತ್ರ
(4) ಎರಡೂ ಮನೆಗಳು ಒಟ್ಟಿಗೆ ಸೇರಿದಾಗ ಮಾತ್ರ

57. ಈ ಕೆಳಗಿನವರಲ್ಲಿ ಯಾರು ಲೋಕಸಭೆಯ ಮೊದಲ ಸಭಾಪತಿಯಾಗಿದ್ದರು ?

(1) ಹುಕುಂ ಸಿಂಗ್
(2) ಜಿ.ಎಸ್. ಧಿಲ್ಲೋನ್
(3) ಜಿ.ವಿ. ಮವಲಾಂಕರ್
(4) ಅನಂತಶಯನಂ ಅಯ್ಯಂಗಾರ್

58. " ಹಿರಾಕುಡ್ " ಅಣೆಕಟ್ಟನ್ನು ಈ ನದಿಗೆ ಅಡ್ಡವಾಗಿ ನಿರ್ಮಿಸಲಾಗಿದೆ :

(1) ಸಟ್ಲೆಜ್ ನದಿ
(2) ಮಹಾನದಿ
(3) ಗೋದಾವರಿ ನದಿ
(4) ಕೃಷ್ಣಾ ನದಿ

www.kpscvaani.com

59. ಭಾರತವು ಜನಸಂಖ್ಯಾ ನಕಾರ ಬೆಳವಣಿಗೆಯನ್ನು ಈ ವರ್ಷದಲ್ಲಿ ಕಂಡಿತು ?

(1) 1911
(2) 1931
(3) 1921
(4) 1951

60. ಈ ಕೆಳಗಿನವುಗಳಲ್ಲಿ ಯಾವುದು ಅಜೈವಿಕ ಸಂಪನ್ಮೂಲವಾಗಿದೆ ?

(1) ಕಲ್ಲಿದ್ದಲು
(2) ಅರಣ್ಯ
(3) ನೀರು
(4) ಖನಿಜ ತೈಲ

61. ಸಂಯುಕ್ತ ಸಂಸ್ಥಾನಗಳ ಡೆಟ್ರಾಯಿಟ್ ಪ್ರದೇಶವು ಇದಕ್ಕಾಗಿ ಪ್ರಸಿದ್ಧವಾಗಿದೆ :

(1) ಕಬ್ಬಿಣ ಮತ್ತು ಉಕ್ಕು
(2) ಹಡಗು ನಿರ್ಮಾಣ
(3) ಮೋಟಾರು ವಾಹನಗಳು
(4) ಪೆಟ್ರೋ ರಾಸಾಯನಿಕಗಳು

62. ಜಾರಿಯಾ ಕಲ್ಲಿದ್ದಲು ಪ್ರದೇಶವು ಇಲ್ಲಿ ಸ್ಥಾಪನೆಯಾಗಿದೆ :

(1) ಜಾರ್ಕಂಡ್
(2) ಮಧ್ಯ ಪ್ರದೇಶ
(3) ಪಶ್ಚಿಮ ಬಂಗಾಳ
(4) ಒರಿಸ್ಸಾ

63. ಈ ಕೆಳಗಿನವುಗಳಲ್ಲಿ ಯಾವುದು ಹಸಿರುಮನೆ ಅನಿಲ ಅಲ್ಲ ?

(1) ಇಂಗಾಲದ ಡೈ ಆಕ್ಸೈಡ್
(2) ಮೀಥೇನ್
(3) ನೈಟ್ರಸ್ ಆಕ್ಸೈಡ್
(4) ಆರ್ಗನ್

www.kpscvaani.com

64. ಬೆಂಗಳೂರು ನಗರ ಕಾರ್ಪೊರೇಷನ್ ಕಟ್ಟಡವು ಇದರಿಂದ ವಿನ್ಯಾಸಗೊಳಿಸಲ್ಪಟ್ಟಿತು:

(1) ಚಾರ್ಲ್ಸ್ ಕೊರಿಯಾ
(2) ಸರ್ .ಎಂ. ವಿಶ್ವೇಶ್ವರಯ್ಯ
(3) ಸರ್. ಪುಟ್ಟಣ್ಣ ಚೆಟ್ಟಿ
(4) ಜಿ. ಹೆಚ್. ಕೃಂಬಿಗಲ್

65. ಭಾರತೀಯ ಕರಾವಳಿಯೊಡನೆ ಕಡಲ ಆಮೆಗಳ ಸಂರಕ್ಷಣೆಯ ಕಥೆ ಪುಸ್ತಕವಾದ " ಫ್ರಂ ಸೂಪ್ ಟು ಸೂಪರ್‌ಸ್ಟಾರ್ " ಇದರಿಂದ ಬರೆಯಲ್ಪಟ್ಟಿದೆ:

(1) ಸಲೀಂ ಅಲಿ
(2) ಕಾರ್ತಿಕ್ ಶಂಕರ್
(3) ಫಾದರ್ ಸಲ್ದಾನ್ಹಾ
(4) ಬಿಟ್ಟು ಸೈಗಲ್

66. ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

| **ಲೇಖಕರು** | **ಪುಸ್ತಕ** |
|---|---|
| (a) ಮರಿಯೊ ಮಿರಾಂಡಾ | (i) ಲೆಸ್ ಮಿಸೆರಬಲ್ಸ್ |
| (b) ಇಂದ್ರಾ ಗೋಸ್ವಾಮಿ | (ii) ಗೋವಾ ವಿದ್ ಲವ್ |
| (c) ವಿಕ್ಟರ್ ಹ್ಯೂಗೋ | (iii) ಎ ಬೆಂಡ್ ಇನ್ ದಿ ರಿವರ್ |
| (d) ವಿ.ಎಸ್. ನೈಪಾಲ್ | (iv) ನೀಲಕಾಂತಿ ಬ್ರೋಜಾ |

**ಸಂಕೇತಗಳು:**

(1) (a)-(iv), (b)-(ii), (c)-(iii), (d)-(i)
(2) (a)-(i), (b)-(iv), (c)-(ii), (d)-(iii)
(3) (a)-(iii), (b)-(ii), (c)-(i), (d)-(iv)
(4) (a)-(ii), (b)-(iv), (c)-(i), (d)-(iii)

67. ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ ?

(1) ತೇಲು ಸಸ್ಯಗಳು ಪ್ರಾಥಮಿಕ ಉತ್ಪಾದಕರು.
(2) ಇತ್ತೀಚಿನ ವರ್ಷಗಳಲ್ಲಿ ಸಾಗರಗಳಲ್ಲಿ ತೇಲು ಸಸ್ಯಗಳು ಶೇಕಡಾ 40 ರಷ್ಟು ಇಳಿಕೆಯಾಗಿದೆ.
(3) ಜಾಗತಿಕ ತಾಪಮಾನದ ಪರಿಣಾಮವಾಗಿ ತೇಲು ಸಸ್ಯಗಳಲ್ಲಿ ಇಳಿಕೆಯಾಗಿದೆ.
(4) ತೇಲು ಸಸ್ಯಗಳು ದ್ವಿತೀಯ ಉತ್ಪನ್ನಗಳು.

www.kpscvaani.com

68. ಭಾರತದಲ್ಲಿ ಸಾಹಿತ್ಯಿಕ ವಿಮರ್ಶೆಯ ನಷ್ಟದ ಸರಿಯಾದ ಕ್ರಮಾಣಿಕೆಯನ್ನು ಕೆಳಗಿನವುಗಳಿಂದ ಗುರ್ತಿಸಿ.

(1) ಗೋವಿಂದ್ ಪನ್ಸಾರೆ ï ಎಂ.ಎಂ. ಕಲಬುರ್ಗಿ – ನರೇಂದ್ರ ದಬೋಲ್ಕರ್
(2) ಗೋವಿಂದ್ ಪನ್ಸಾರೆ – ನರೇಂದ್ರ ದಬೋಲ್ಕರ್ – ಎಂ.ಎಂ. ಕಲಬುರ್ಗಿ
(3) ಎಂ.ಎಂ. ಕಲಬುರ್ಗಿ – ಗೋವಿಂದ್ ಪನ್ಸಾರೆ – ನರೇಂದ್ರ ದಬೋಲ್ಕರ್
(4) ನರೇಂದ್ರ ದಬೋಲ್ಕರ್ – ಗೋವಿಂದ್ ಪನ್ಸಾರೆ ï ಎಂ.ಎಂ. ಕಲಬುರ್ಗಿ

69. ವಿಶ್ವದ ಅತಿ ಎತ್ತರದ ಕಟ್ಟಡಗಳಲ್ಲೊಂದನ್ನು ಮಲೇಷಿಯಾದಲ್ಲಿ ನಿರ್ಮಿಸಲಾಗಿದ್ದು ಅದು :

(1) ಪೆಟ್ರೋನಸ್ ಟವರ್ಸ್
(2) ಬುರ್ಜ್ ಖಲೀಫಾ
(3) ಸಿ.ಎಸ್. ಟವರ್
(4) ಕ್ಯಾಂಟನ್ ಟವರ್

70. ಅಮೆರಿಕಾ ಸಂಯುಕ್ತ ಸಂಸ್ಥಾನದ ಯಾವ ರಾಜ್ಯಕ್ಕೆ ಮಹಾತ್ಮಾ ಗಾಂಧೀಜಿಯವರ ಮರಿ ಮೊಮ್ಮಗ (great grandson) ರಾಜನೀತಿಜ್ಞನಾಗಿ ಆಯ್ಕೆಯಾದರು ?

(1) ಕಾನ್ಸಾಸ್
(2) ಕ್ಯಾಲಿಫೋರ್ನಿಯಾ
(3) ಅರಿಝೋನಾ
(4) ಟೆಕ್ಸಾಸ್

71. ಕರ್ನಾಟಕದ ನಾಲ್ಕು ಆಡಳಿತಾತ್ಮಕ ವಿಭಾಗಗಳಲ್ಲಿ ಯಾವುದು ಅತ್ಯಂತ ದೊಡ್ಡ ವಿಸ್ತೀರ್ಣವನ್ನು ಮತ್ತು ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ ?

(1) ಬೆಂಗಳೂರು
(2) ಬೆಳಗಾಂ
(3) ಗುಲ್ಬರ್ಗಾ
(4) ಮೈಸೂರು

72. ಈ ಕೆಳಗಿನ ಯಾವ ನದಿಯು ಕರ್ನಾಟಕದಲ್ಲಿ ಪಶ್ಚಿಮದ ಕಡೆಗೆ ಹರಿಯದ ನದಿಯಾಗಿದೆ ?

(1) ಮುಲ್ಕಿ
(2) ವರದಾ
(3) ಸ್ವರ್ಣ
(4) ಹಳದಿ

www.kpscvaani.com

73. ‘ ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ ’ (1934) ಕೃತಿಯು ಇವರದು :

(1) ಜಾನ್ ಮಥಾಯ್
(2) ಎಂ. ಎನ್. ರೋಯ್
(3) ಸರ್. ಎಂ. ವಿಶ್ವೇಶ್ವರಯ್ಯ
(4) ಶ್ರೀಮಾನ್ ನಾರಾಯಣ್

74. ಮೈಸೂರು ನಗರದ ಪ್ರಸಿದ್ಧ ಪ್ರವಾಸಿ ಆಕರ್ಷಣೆಯಾದ ‘ ಮೈಸೂರು ಅರಮನೆ ’ಯು ಇವರಿಂದ ವಿನ್ಯಾಸಗೊಳಿಸಲ್ಪಟ್ಟಿತು :

(1) ಕೃಂಬಿಗಲ್
(2) ಹೆನ್ರಿ ಇರ್ವಿನ್
(3) ಮೈಕೆಲ್ ಆಲ್ಡನ್
(4) ಜಾನ್ ವೆಲ್‌ಶ್

75. ಮಾನವ ಅಭಿವೃದ್ಧಿ ಸೂಚಕವು ಇದನ್ನು ಒಳಗೊಳ್ಳುತ್ತದೆ :

(1) ಶಿಶು ಮರಣ ದರ
(2) ಜನನದ ಜೀವಿತ ನಿರೀಕ್ಷೆ
(3) ನಿವ್ವಳ ಸಂತಾನೋತ್ಪತ್ತಿ ದರ
(4) ಅಸಾಮರ್ಥ್ಯದ ವರ್ಷಗಳ ಸಂಖ್ಯೆ

76. 2016 ರ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಪ್ರಧಾನಾಶಯ (ವಸ್ತುವಿಷಯ) ಯಾವುದು ?

(1) ಭಾರತದ ದೇಶೀಯ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ
(2) ಭಾರತದ ಗ್ರಾಮೀಣಾಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ
(3) ಭಾರತದ ಮಾನವಾಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ
(4) ಭಾರತದ ಅಂತರ್ಗತ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ

77. ಸೂರ್ಯನ ಕೇಂದ್ರ ಭಾಗದಲ್ಲಿ ನ್ಯೂಕ್ಲಿಯರ್ ಸಮ್ಮಿಳನಕ್ಕೆ (ಫ್ಯೂಶನ್) ಬೇಕಾಗುವ ಇಂಧನ ಯಾವುದು ?

(1) ಜಲಜನಕ
(2) ಹೀಲಿಯಂ
(3) ಯುರೇನಿಯಂ
(4) ಥೋರಿಯಂ

www.kpscvaani.com

78. ಬೈಟ್‌ಗಳ ಸಂಖ್ಯೆಯ ಆರೋಹಣಕ್ಕಾನುಗುಣವಾಗಿ ಈ ಕೆಳಗಿನ ಗಣಕ ಸಂಗ್ರಹ ಘಟಕಗಳನ್ನು ವ್ಯವಸ್ಥಿತ ಕ್ರಮದಲ್ಲಿ ಜೋಡಿಸಿ:

(a) ಟೆರಬೈಟ್
(b) ಎಕ್ಸಾಬೈಟ್
(c) ಝೆಟಾಬೈಟ್
(d) ಪೆಟಾಬೈಟ್
(e) ಗಿಗಾ ಬೈಟ್

ಸರಿಯಾದ ಉತ್ತರವನ್ನು ಆರಿಸಿರಿ:

(1) (e), (b), (d), (a), (c)
(2) (e), (a), (d), (b), (c)
(3) (a), (e), (c), (d), (b)
(4) (d), (c), (e), (b), (a)

79. ಬೌದ್ಧರ ಧ್ಯಾನದ ಒಂದು ತಂತ್ರದ ವಿಧಾನವಾದ ವಿಪಾಸನಾವು ಭಾರತದಲ್ಲಿ ಈ ಕೆಳಗಿನ ಯಾರಿಂದ ಜನಪ್ರಿಯಗೊಳಿಸಲ್ಪಟ್ಟಿತು ?

(1) ಎಸ್. ಎನ್. ಗೋಯಂಕ
(2) ರಘು ಆರ್. ಧರ್ಮದಾಸನ್
(3) ಆನಂದ ಮಹಿಪಾಲ ಎಂ. ಕೆ.
(4) ಬಿ. ಎನ್. ಸರೋಜ್ ಅಧಿಕಾರಿ

80. ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| (a) ಕ್ರಿಪ್ಟಾಲಜಿ | (i) ವಾಸನೆಗಳು (ಸ್ಮೆಲ್ಸ್) |
| (b) ಹಿಪ್ನಾಲಜಿ | (ii) ಮರ (ವುಡ್) |
| (c) ಓಸ್ಮಾಲಜಿ | (iii) ನಿದ್ರೆ (ಸ್ಲೀಪ್) |
| (d) ಕ್ಸೈಲಾಲಜಿ | (iv) ಸಂಕೇತಗಳು (ಕೋಡ್ಸ್) ಮತ್ತು ಗುಪ್ತಲಿಪಿಗಳು (ಚಿಫರ್ಸ್) |

ಸರಿಯಾದ ಉತ್ತರವನ್ನು ಆರಿಸಿರಿ.

(1) (a)=(iii); (b)=(iv); (c)=(ii); (d)=(i)
(2) (a)=(iv); (b)=(iii); (c)=(i); (d)=(ii)
(3) (a)=(ii); (b)=(i); (c)=(iv); (d)=(iii)
(4) (a)=(iii); (b)=(iv); (c)=(i); (d)=(ii)

www.kpscvaani.com

81. ಬಹರೈನ್‌ನ ರಾಜಧಾನಿ :

(1) ದೊಹ
(2) ಸನಾ'ಅ'
(3) ಅಸ್ತಾನ
(4) ಮನಮ

82. ಸತ್ರಿಯ ನೃತ್ಯ ಎಂಬ ನೃತ್ಯ ಪ್ರಕಾರವು ಈ ಕೆಳಗಿನ ಯಾವ ರಾಜ್ಯದ ಪ್ರಕಾರವಾಗಿದೆ ?

(1) ಅರುಣಾಚಲ ಪ್ರದೇಶ
(2) ಮಣಿಪುರ
(3) ಅಸ್ಸಾಂ
(4) ಒರಿಸ್ಸಾ

83. ಏಕಲವ್ಯ ಪ್ರಶಸ್ತಿಯು ನೀಡಲ್ಪಡುವುದು ______________

(1) ಗಣನೀಯ ಸಾಧನೆ ತೋರಿದ ಕ್ರೀಡಾಪಟುಗಳಿಗೆ ಕರ್ನಾಟಕ ಸರ್ಕಾರವು ನೀಡುವ ಪ್ರಶಸ್ತಿ.
(2) ಕಿರಿಯ ಅಥ್ಲೀಟ್‌ಗಳಿಗೆ ಭಾರತ ಸರ್ಕಾರ ನೀಡುವ ಭರವಸೆ.
(3) ರೈಲ್ವೆಯ ವರ್ಷದ ಉತ್ತಮ ಕ್ರೀಡಾಪಟುವಿಗೆ ಭಾರತೀಯ ರೈಲ್ವೆಯವರು ನೀಡುವ ಪ್ರಶಸ್ತಿ.
(4) ಬಿಲ್ಲುಗಾರಿಕೆಯಲ್ಲಿ ಗಣನೀಯ ಸಾಧನೆ ತೋರಿದವರಿಗೆ ತ್ರಿಪುರ ಸರ್ಕಾರ ನೀಡುವ ಪ್ರಶಸ್ತಿ.

84. ನಿಶ್ಯಬ್ದ ಕಣಿವೆಯು ಯಾವ ರಾಜ್ಯದಲ್ಲಿದೆ ?

(1) ತಮಿಳುನಾಡು
(2) ಕೇರಳ
(3) ಅಸ್ಸಾಂ
(4) ಅರುಣಾಚಲ ಪ್ರದೇಶ

85. ಭಾರತದ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಯಾವ ರೀತಿಯ ವಿದ್ಯುತ್ ಗಣನೆಯು ಅತಿ ಹೆಚ್ಚಿನ ಪಾಲನ್ನು ಹೊಂದಿದೆ ?

(1) ಜಲ ವಿದ್ಯುಚ್ಛಕ್ತಿ
(2) ಥರ್ಮಲ್ (ಉಷ್ಣ)
(3) ನ್ಯೂಕ್ಲಿಯರ್ (ಅಣು)
(4) ಸೌರ

www.kpscvaani.com

86. ಯಾವ ರಾಜ್ಯವು ಪ್ರಮುಖವಾಗಿ ಥೋರಿಯಂನ್ನು ಉತ್ಪಾದಿಸುತ್ತದೆ ?

(1) ಕೇರಳ
(2) ಬಿಹಾರ್
(3) ಒರಿಸ್ಸಾ
(4) ಮಧ್ಯಪ್ರದೇಶ

87. ಟಾಲ್‌ಚೆರ್ (Talcher) ಎಂಬುದು ಯಾವುದಕ್ಕೆ ಪ್ರಮುಖವಾಗಿದೆ ?

(1) ಥರ್ಮಲ್ ಶಕ್ತಿ
(2) ಪರಮಾಣು ರಿಯಾಕ್ಟರ್ (ಪ್ರತಿಕ್ರಿಯಾಕಾರಿ)
(3) ಭಾರ ಜಲಸ್ಥಾವರ
(4) ಕೇಬಲ್ ಉದ್ಯಮ

88. ಹಣದುಬ್ಬರದತ್ತ ಬೇಡಿಕೆ ಸೆಳೆತದ ಅಂಶಗಳೆಂದರೆ :

(1) ಅಭಿವೃದ್ಧ್ಯಾತ್ಮಕ ವೆಚ್ಚ
(2) ಹೆಚ್ಚಿದ ಕೃಷಿ ಹುಟ್ಟುವಳಿ
(3) ಸಮತೋಲಿತ ಆಯವ್ಯಯ
(4) ಕೈಗಾರಿಕಾ ಹುಟ್ಟುವಳಿಯಲ್ಲಾದ ಹೆಚ್ಚಳ

89. ಇಂದು ಭಾರತದ ಜಿ.ಡಿ.ಪಿ. ಯಲ್ಲಿ ಕೃಷಿಯ ಕೊಡುಗೆ __________

(1) 42%
(2) 18%
(3) 27%
(4) 57%

90. 2011ರ ಜನಗಣತಿಯ ಮೇರೆಗೆ ಸಾಕ್ಷರತೆಯಲ್ಲಿನ ಮೂರು ಅಗ್ರ ಸ್ಥಾನಗಳನ್ನು ಕ್ರಮವಾಗಿ ಇವುಗಳಿಗೆ ನೀಡಬೇಕಾಗುತ್ತದೆ:

(1) ಕೇರಳ, ಪಶ್ಚಿಮ ಬಂಗಾಳ, ಗೋವಾ
(2) ಮಿಜೋರಾಂ, ಕೇರಳ, ತ್ರಿಪುರ
(3) ಕೇರಳ, ಲಕ್ಷದ್ವೀಪ, ಮಿಜೋರಾಂ
(4) ಚಂಡೀಗಢ್, ಕೇರಳ, ಗೋವಾ

www.kpscvaani.com

91. ಈ ಕೆಳಗಿನ ಯಾವ ರಾಷ್ಟ್ರವು ಅತ್ಯಂತ ಹೆಚ್ಚಿನ ಜನಸಾಂದ್ರತೆಯನ್ನು ಹೊಂದಿದೆ ?

(1) ಪಾಕಿಸ್ತಾನ
(2) ಬಾಂಗ್ಲಾದೇಶ
(3) ಭಾರತ
(4) ಶ್ರೀಲಂಕಾ

92. ಭಾರತೀಯ ರೈಲ್ವೆಯವರಿಂದ ನಿರ್ಮಿಸಲಾದ ಪೌರಸ್ತ್ಯ ಮೀಸಲಾದ ಸರಕು ಸಾಗಣೆ ಓಣಿಯು ಇವುಗಳನ್ನು ಸೇರಿಸುತ್ತದೆ :

(1) ಪಾಣಿಪಟ್ ಮತ್ತು ಅಲಹಾಬಾದ್
(2) ರಾಜ್‌ಕೋಟ್ ಮತ್ತು ಭುವನೇಶ್ವರ್
(3) ಜವಾಹರಲಾಲ್ ನೆಹರೂ ಬಂದರು ಮತ್ತು ತುಘಲಕಾಬಾದ್
(4) ಲೂಧಿಯಾನಾ ಮತ್ತು ಸೊನ್ನಗಾರ್

93. ನಾಗರಿಕ ವಾಯುಯಾನ ತರಬೇತಿ ಕೇಂದ್ರವು ಎಲ್ಲಿದೆ ?

(1) ಕೋಲ್ಕತ್ತಾ
(2) ದೆಹಲಿ
(3) ಚೆನ್ನೈ
(4) ಅಲಹಾಬಾದ್

94. ಸಂವಿಧಾನದ ಯಾವ ಕಲಮು ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪು ಅಥವಾ ಆದೇಶವನ್ನು ಪುನರ್ ಪರಿಶೀಲಿಸಲು ಅನುಮತಿಸಿದೆ ?

(1) 130 ನೇ ಕಲಮು
(2) 137 ನೇ ಕಲಮು
(3) 138 ನೇ ಕಲಮು
(4) 139 ನೇ ಕಲಮು

95. ರಾಜ್ಯದ ರಾಜ್ಯಪಾಲರು ತಮ್ಮ ಪ್ರಮಾಣ ವಚನವನ್ನು ನಿರ್ವಹಿಸುವುದು ಇವರಿಂದ :

(1) ಭಾರತದ ಮುಖ್ಯ ನ್ಯಾಯಾಧೀಶರು.
(2) ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು.
(3) ಅಧ್ಯಕ್ಷರು.
(4) ಮೇಲಿನ ಯಾವುದೂ ಅಲ್ಲ.

www.kpscvaani.com

96. ಸರ್ಕಾರಿಯಾ ಆಯೋಗವು ಬೆಂಬಲಿಸಿರುವುದು :

(1) ರಾಜ್ಯಪಾಲರ ಕಛೇರಿಯ ರದ್ಧತಿ.
(2) ಸಂಬಂಧಿತ ರಾಜ್ಯ ಸರ್ಕಾರಗಳು ನೀಡಿರುವ ಹೆಸರುಗಳ ಪಟ್ಟಿಯಿಂದ ರಾಜ್ಯದ ರಾಜ್ಯಪಾಲರನ್ನು ಅಧ್ಯಕ್ಷರು ಆಯ್ಕೆ ಮಾಡುವುದು.
(3) ರಾಜ್ಯಪಾಲರ ಕಛೇರಿಯ ಧಾರಣ.
(4) ಮೇಲಿನ ಯಾವುದೂ ಅಲ್ಲ.

97. ವಿಕಿರಣಶೀಲವಲ್ಲದ ಅಂಶ ಯಾವುದು ?

(1) ಅಸ್ಟಟೀನ್
(2) ಫ್ರಾನ್‌ಸಿಯಂ
(3) ಟ್ರೇಟಿಯಂ
(4) ಝೀರ್‌ಕೊನಿಯಂ

98. 1ನೇ ಪಟ್ಟಿಯಲ್ಲಿರುವ ಅಂಶಗಳನ್ನು 2ನೇ ಪಟ್ಟಿಯೊಂದಿಗೆ ಹೊಂದಿಸಿರಿ.

| ಪಟ್ಟಿ ï I | ಪಟ್ಟಿ ï II |
|---|---|
| (a) ಶರ್ಕರಪಿಷ್ಟ (ಕಾರ್ಬೋಹೈಡ್ರೇಟ್) | (i) ಪೆಪ್ಸಿನ್ |
| (b) ಕಿಣ್ವ (ಎನ್‌ಝೈಂ) | (ii) ಗಂಜಿ (ಸ್ಟಾರ್ಚ್) |
| (c) ಹಾರ್ಮೋನು | (iii) ಕೆರಾಟಿನ್ |
| (d) ಪ್ರೋಟೀನ್ | (iv) ಪ್ರೊಗೆಸ್ಟೆರೋನ್ |

ಸರಿಯಾದ ಹೊಂದಿಕೆಯನ್ನು ಮಾಡಿರಿ:

| | (a) | (b) | (c) | (d) |
|---|---|---|---|---|
| (1) | (i) | (ii) | (iii) | (iv) |
| (2) | (ii) | (i) | (iv) | (iii) |
| (3) | (ii) | (i) | (iii) | (iv) |
| (4) | (i) | (ii) | (iv) | (iii) |

www.kpscvaani.com

99. ಅರ್ಬುದ ರೋಗದ ವಿರುದ್ಧದ ಅದ್ಭುತ ಸುಪರಿಚಿತ ಔಷಧಿಯಾದ ' ಟ್ಯಾಕ್ಸೋಲ್ ' ನ್ನು ಈ ವೃಕ್ಷದಿಂದ ಸಂಗ್ರಹಿಸಲಾಗಿದೆ:

(1) ಬೇವು
(2) ಯೂ (Yew)
(3) ಓಕ್
(4) ಅಶ್ವತ್ಥ (Peepal)

100. ಇದರ ಕೊರತೆಯು ಗಾಯಟರ್‌ಗೆ ಕಾರಣವಾಗುತ್ತದೆ :

(1) ಕ್ಯಾಲ್ಸಿಯಂ
(2) ಕಬ್ಬಿಣ
(3) ರಂಜಕ
(4) ಅಯೋಡಿನ್

www.kpscvaani.com